

# ಹಟ್ಟಿ ಲಕ್ಕವ್ವ!

ಕರ್ನಾಟಕದ ಬಯಲುನಾಡಿನ ಅನೇಕ ಕಡೆ ದೀಪಾವಳಿ ಅಮಾವಾಸ್ಯೆಯ ಮಾರನೆಯ ದಿನ ಈ ಹಟ್ಟಿಲಕ್ಕವ್ವಳನ್ನು ಪ್ರತಿಷ್ಠಾಪಿಸುತ್ತಾರೆ. ಬಲೀಂದ್ರ ಕೋಟೆಯೆಂದೂ ಹಲವೆಡೆ ಕರೆಯುತ್ತಾರಾದರೂ ಆಕಾರ ಅಲಂಕಾರಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಒಂದು ಮೊರದಷ್ಟು ದನದ ಸೆಗಣಿಯನ್ನು ಗುಡ್ಡೆಯಾಗಿಸಿಟ್ಟು ಅದಕ್ಕೆ ನಮ್ಮ ರೈತಾಪಿ ಜೀವನದಲ್ಲಿ ಹಾಸುಹೊಕ್ಕ ಎಲ್ಲ ಜಾತಿಯ ಸಸಿಗಳ ಆಯ್ದ ಭಾಗಗಳಿಂದ ಅಲಂಕರಿಸುತ್ತೇವೆ. ಜೋಳ, ರಾಗಿ ತೆನೆ, ತೊಗರಿ, ಅವರೆ, ಮೆಣಸು, ಈರುಳ್ಳಿ, ಹೀರೆಕಾಯಿ, ಮಹಾಲಿಂಗನ ಬಳ್ಳಿ, ಮಲದಂಡೆಲಚ್ಚಿ, ಉತ್ತರಾಣಿ ಕಡ್ಡಿ.. ಹೀಗೆ ಭೂತಾಯಿಯ ಎಲ್ಲ ಮಕ್ಕಳನ್ನು ಇದಕ್ಕೆ ಪೋಣಿಸಿ ಸುತ್ತಲು ಬ್ಯಾನಪ್ಪ (ಬೆನಕ)ನನ್ನು ಪ್ರತಿಷ್ಠಾಪಿಸಿ ಸಂಭ್ರಮಿಸುತ್ತೇವೆ. ಮೇಲೆ ತಿಳಿಸಿದ ನಡೆ ಸಾಮಾನುಗಳನ್ನು ಸಂಗ್ರಹಿಸಲು ಹೊಲ, ಹಳ್ಳ, ಗುಡ್ಡಗಳನ್ನು ತಿರುಗಾಡಿ ತರುವುದೇ ಒಂದು ರೋಚಕ ಅನುಭವ.

■ ಅಣ್ಣಪ್ಪ ಅರಬಗಟ್ಟೆ

# ಕರ್ನೂಲಿನ ಮಹಾನಂದಿ

ಆಂಧ್ರಪ್ರದೇಶದ ಕರ್ನೂಲು ನಲ್ಲಮಾಲಾ ಬೆಟ್ಟಗಳ ಪೂರ್ವಕ್ಕಿದೆ. ಈ ಜಿಲ್ಲೆಯಲ್ಲಿನ ಮಹಾನಂದಿಯ ಮಹಾನಂದೀಶ್ವರ ಸ್ವಾಮಿ ದೇಗುಲವು ಜಗತ್ತಿನ ದೊಡ್ಡ ನಂದಿಯ ಪ್ರತಿಮೆಯಿಂದ ಸುಪ್ರಸಿದ್ಧವಾಗಿದೆ. ಇಲ್ಲಿನ ಮಹಾನಂದಿಯು 15 X 27 ಅಡಿ ಅಳತೆಯದಾಗಿದೆ. ನಂದಿಯು ಕುಳಿತ ಭಂಗಿಯಲ್ಲಿ ಅತ್ಯಂತ ಆಕರ್ಷಕವಾಗಿದೆ. ಸುತ್ತಲೂ ನವ ನಂದಿಗಳು ಎಂಬ ಒಂಬತ್ತು ನಂದಿ ದೇವಾಲಯಗಳಿವೆ.

■ ಪ್ರಕಾಶ ಎಸ್.ಮನ್ನಂಗಿ, ಮೋಟೇಬೆನ್ನೂರು





# ಛದ್ಮವೇಷ!

ಮನೆಯ ಜಗುಲಿಯಲ್ಲಿ ಆಚೆ ಈಚೆ ಓಡುತ್ತಿದ್ದ ಈ ವಿಚಿತ್ರ ಜೀವಿಯನ್ನು ಕಂಡು ಮಗ ನನ್ನನ್ನು ಕರೆದು ತೋರಿಸಿದ. ನಾನೂ ಕುತೂಹಲದಿಂದ ನೋಡಿದೆ. ಕೀಟವೇ ಎಲೆಯ ರೀತಿಯಲ್ಲಿ ಛದ್ಮವೇಷ ಧರಿಸಿದಂತಿತ್ತು. ಶತ್ರುಗಳಿಂದ ರಕ್ಷಣೆಗಾಗಿ ಎಲೆಯನ್ನೇ ಕವಚವಾಗಿ ಬಳಸಿದಂತೆ ತೋರುತ್ತಿತ್ತು. ಪ್ರಕೃತಿಯೇ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಿ ಕೊಟ್ಟಂತಿದೆ.

■ ಅಶ್ವಿನಿ ಮೂರ್ತಿ ಅಯ್ಯನಕಟ್ಟೆ, ಸುಳ್ಯ